# ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
# ಹಾಗೂ ವಿಶೇಷ ನ್ಯಾಯಾಲಯ, ಹಾವೇರಿ
## ಸ್ಪೆಷಲ್ ಎಸ್.ಸಿ./ಎಸ್.ಟಿ.20/2021

Pw-19

Cw-38

| | |
|---|---|
| ಸಾಕ್ಷಿದಾರರ ಹೆಸರುಃ | ಪ್ರಹ್ಲಾದ್ ಚೆನ್ನಗಿರಿ |
| ತಂದೆಃಗಂಡನ ಹೆಸರುಃ | ರಾಮಪ್ಪ |
| ವಯಸ್ಸುಃ | 40 ವರ್ಷ |
| ಉದ್ಯೋಗಃ | ಸಿಪಿಐ, ಡಿಸಿಆರ್ ಬಿ |
| ವಾಸ ಸ್ಥಳಃ | ಬೆಳಗಾವಿ |

**ದಿನಾಂಕ:06.01.2025 ರಂದು ಸಾಕ್ಷಿ ಹಾಜರಿದ್ದು , ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದಃ**

1. ದಿನಾಂಕಃ27.11.2020 ರಿಂದ 14.01.2022 ರವರೆಗೆ ಹಾವೇರಿ ಶಹರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ17.03.2021 ರಂದು ಈ ಕೇಸಿನ ಮುಂದಿನ ತನಿಖೆಯನ್ನು ಚಾಸಾ-37 ರವರಿಂದ ಪಡೆದುಕೊಂಡು, ಅದೇ ದಿನ ನಿಪಿ-15 ರಂತೆ ಮೃತ ನಿಂಗಪ್ಪನ ಶವ ಪಂಚನಾಮೆ ಮಾಡಿರುತ್ತೇನೆ. ಸಾಕ್ಷಿ ಸಹಿ ನಿಪಿ-15(ಸಿ) ಅಂತಾ ಗುರುತಿಸಲಾಯಿತು. ಪೋಟೋ ನಿಪಿ-16 ರಿಂದ 18 ಅಂತಾ ಈಗಾಗಲೇ ಗುರುತಿಸಲಾಗಿದೆ. ಗಣೇಶನ ಶವ ಪಂಚನಾಮೆ ಮಾಡಲು ಚಾಸಾ-37 ರವರಿಗೆ ಆದೇಶಿಸಿದೆನು. ಪಿ.ಎಂ ಮಾಡಿಸಲು ಜಿಲ್ಲಾ ಆಸ್ಪತ್ರೆಗೆ ಶವಗಳನ್ನು ಕಳಿಸಿದೆನು.

2. ದಿನಾಂಕಃ17.03.2021 ರಂದು ನಿಪಿ-3 ರಂತೆ ಸ್ಥಳ ಪಂಚನಾಮೆ, ನಿಪಿ-4 ರಂತೆ ಕಚ್ಚಾ ನಕ್ಷೆ ಮಾಡಿರುತ್ತೇನೆ. ಸಾಕ್ಷಿ ಸಹಿ ನಿಪಿ-3(ಸಿ), ನಿಪಿ-4(ಸಿ) ಅಂತಾ ಗುರುತಿಸಲಾಯಿತು. ಪೋಟೋ ನಿಪಿ-5 ರಿಂದ 10 ಅಂತಾ ಈಗಾಗಲೇ ಗುರುತಿಸಲಾಗಿದೆ. ಸ್ಥಳದಲ್ಲಿ ನ್ಯಾಯಾಲಯದ ಮುಂದಿರುವ ಮು.ಮಾ-1 ರಿಂದ 7 ನ್ನು ಜಪ್ತು ಮಾಡಿರುತ್ತೇನೆ.

ಚಾಸಾ-1 ರವರ ಮರು ಹೇಳಿಕೆ ಮಾಡಿಕೊಂಡಿರುತ್ತೇನೆ. ಆತನು ಆರೋಪಿಗಳ ಮೇಲೆ ಸಂಶಯ ವ್ಯಕ್ತಪಡಿಸಿರುತ್ತಾನೆ. ಚಾಸಾ-37 ಮತ್ತು ಸಿಬ್ಬಂದಿಯವರಿಗೆ ಆರೋಪಿಗಳನ್ನು ಕರೆದುಕೊಂಡು ಬರಲು ಆದೇಶಮಾಡಿರುತ್ತೇನೆ. ಅದೇ ದಿನ ಸಿಬ್ಬಂದಿಯವರು ಆರೋಪಿಗಳನ್ನು ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ಅವರ ಹೇಳಿಕೆಯನ್ನು ಮಾಡಿಕೊಂಡಾಗ ಕೃತ್ಯ ಎಸಗಿದ್ದನ್ನು ಒಪ್ಪಿಕೊಂಡಿರುತ್ತಾರೆ. ಎಸ್.ಸಿ/ಎಸ್.ಟಿ ಕಾಯಿದೆ ಅಳವಡಿಸಿಕೊಳ್ಳಲು ನ್ಯಾಯಾಲಯಕ್ಕೆ ಕೋರಿಕೊಂಡೆನು. ನಂತರ ಮುಂದಿನ ತನಿಖೆಯನ್ನು ಚಾಸಾ-39 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಯು.ಎನ್.ಜಿ ವಕೀಲರಿಂದಃ**

3. ಬೆಳಿಗ್ಗೆ 10.00 ಗಂಟೆಯವರೆಗೆ ಈ ಕೇಸಿನ ಬಗ್ಗೆ ಮಾಹಿತಿ ಬಂತು. ಪೊಲೀಸರು ಅಲ್ಲಿಗೆ ಹೋದ ಬಗ್ಗೆ ಮಾಹಿತಿ ಇಲ್ಲ. ಚಾಸಾ-1 ಅವರ ಮರು ಹೇಳಿಕೆಯನ್ನು ಮಧ್ಯಾಹ್ನ 3.15 ಗಂಟೆಗೆ ಪಡೆದುಕೊಂಡಿರುತ್ತೇನೆ. ನಿಪಿ-15 ನ್ನು 11.30 ರಿಂದ 1.00 ಗಂಟೆಯವರೆಗೆ ಮಾಡಿರುತ್ತೇನೆ. ಅಲ್ಲಿಯವರೆಗೆ ಸ್ಥಳ ಬಿಟ್ಟು ಹೋಗಿಲ್ಲ. ನಿಪಿ-16, 17 ರಲ್ಲಿ ಪಂಚರು, ಚಾಸಾ-1, ಸಿಬ್ಬಂದಿ ಬಿಟ್ಟು ಬೇರೆ ಯಾರೂ ಇಲ್ಲ. ನಿಪಿ-16, 17 ರಲ್ಲಿ ಇನ್ನೊಂದು ಶವ ಕಾಣುತ್ತಿಲ್ಲ. ನಿಪಿ-16, 17 ರಲ್ಲಿ ದೀಪಕ್ ಜನ್ನು ಎನ್ನುವವರು ಇಲ್ಲ ಎಂದರೆ ಸರಿ.

4. ಚಾಸಾ-37 ರವರು ಮಧ್ಯಾಹ್ನ 12.00 ರಿಂದ 1.30 ಗಂಟೆಯವರೆಗೆ ನಿಪಿ-11 ನ್ನು ಮಾಡಿರುತ್ತಾರೆ. ಸಾಮಾನ್ಯವಾಗಿ ಸ್ಥಳೀಯರನ್ನು ಪಂಚರನ್ನಾಗಿ ತೆಗೆದುಕೊಳ್ಳುತ್ತಾರೆ ಎಂದರೆ ಸರಿ. ಇಬ್ಬರು ಪಂಚರು ಸ್ಥಳೀಯರಲ್ಲ ಎಂದರೆ ಸರಿ. ಸ್ಥಳೀಯರನ್ನು ಕರೆಸಲು ತೊಂದರೆ ಇರಲಿಲ್ಲ. ಬೆಳಿಗ್ಗೆ 10.30 ಗಂಟೆಗೆ ಯತ್ತಿನಹಳ್ಳಿ ಗ್ರಾಮಕ್ಕೆ ಹೋಗಿರುತ್ತೇನೆ. ನಿಪಿ-15 ನ್ನು ಬರೆಯುವಾಗಿ ರೂಮಿನ ಅಳತೆ ಬರೆದಿಲ್ಲ.

5. ಇಬ್ಬರು ತನಿಖಾಧಿಕಾರಿಗಳು ಒಂದೇ ಸಮಯಕ್ಕೆ ಶವ ಪಂಚನಾಮೆ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಒಂದೇ ಸಮಯದಲ್ಲಿ ಪಂಚನಾಮೆ ಮಾಡಿದರೆ ಇಬ್ಬರೂ ತನಿಖಾಧಿಕಾರಿಗಳು ಫೋಟೋದಲ್ಲಿ ಬರುತ್ತಾರೆ ಎಂದರೆ ಸರಿಯಲ್ಲ, ಶವ ಸಿಕ್ಕ ಸ್ಥಳದಲ್ಲಿ ಶವ

ಪಂಚನಾಮೆ ಮಾಡಬೇಕು ಎಂದರೆ ಸರಿ. ನಿಪಿ-16, 17 ರಲ್ಲಿ ಇನ್ನೊಂದು ಶವ ಇಲ್ಲ ಎಂದರೆ ಸರಿ. ಪಂಚರಿಗೆ ಯಾವಾಗ ನೋಟೀಸು ಕೊಟ್ಟಿದ್ದೆವು ನೆನಪಿಲ್ಲ. ಪೋಟೋವನ್ನು ಯಾವ ಕ್ಯಾಮೆರಾದಲ್ಲಿ ತೆಗೆದೆವು ನೆನಪಿಲ್ಲ. ಸಮಯ, ದಿನಾಂಕ ಪೋಟೋದಲ್ಲಿ ಬಂದಿಲ್ಲ.

6. ಸ್ಥಳದಲ್ಲಿ ಸಾಕ್ಷಿದಾರರ ಹೇಳಿಕೆ ಮಾಡಿಕೊಂಡಿಲ್ಲ. ಪಿ.ಎಂ ಗೆ ಕಳಿಸಿದ ವರದಿಯಲ್ಲಿ ತಿದ್ದುಪಡಿಯಾಗಿದೆ ಎಂದರೆ ಸರಿಯಲ್ಲ. ತಿದ್ದುಪಡಿಯಾದರೆ ಚಿಕ್ಕ ಸಹಿ ಮಾಡುತ್ತಾರೆ ಎಂದರೆ ಗೊತ್ತಿಲ್ಲ. ಶವ ಪಂಚನಾಮೆ ಕಾಲಕ್ಕೆ ಯಾವುದೇ ವಸ್ತುವನ್ನು ಜಪ್ತು ಮಾಡಿಲ್ಲ. ನಿಪಿ-15 ರ ಕಾಲಂ.12, 13 ರಲ್ಲಿ ಹಣಕಾಸಿನ ವ್ಯವಹಾರದ ಬಗ್ಗೆ ನಮೂದು ಇಲ್ಲ. ನಿಪಿ-16, 17 ರಲ್ಲಿ ಯಾವುದೇ ವಸ್ತುಗಳು ಕಾಣುತ್ತಿಲ್ಲ. ಪೋಟೋದಲ್ಲಿ ಡಂಬಲ್ಸ ಇದ್ದ ಬಗ್ಗೆ ಕಾಣುತ್ತಿಲ್ಲ ಎಂದರೆ ಸರಿ.

7. ನಿಪಿ-3 ರಲ್ಲಿರುವ ಪಂಚರಿಗೆ ಮಧ್ಯಾಹ್ನ 1.30 ಗಂಟೆಗೆ ನೋಟೀಸು ಕೊಟ್ಟಿರುತ್ತೇನೆ. ಅವರು ಸ್ಥಳದಲ್ಲೇ ಇದ್ದರು. ಅವರ ಹೇಳಿಕೆ ಮಾಡಿಕೊಂಡಿಲ್ಲ. ಪಂಚರಲ್ಲದೇ ಬೇರೆ ಜನ ಸೇರಿದ್ದರು ಅವರ ಹೇಳಿಕೆ ಮಾಡಿಕೊಂಡಿಲ್ಲ. ನಿಪಿ-5 ರಿಂದ 10 ರಲ್ಲಿ ಜಪ್ತು ಮಾಡಿದ ವಸ್ತುಗಳು ಕಾಣುತ್ತಿಲ್ಲ. ನಿಪಿ-4 ನ್ನು ಪಂಚನಾಮೆ ಸಮಯದಲ್ಲಿ ಬರೆದಿದ್ದೇನೆ. ನಿಪಿ-4 ರಲ್ಲಿ ರೂಮಿನ ಅಳತೆ ಬರೆದಿಲ್ಲ. ಶವಗಳನ್ನು ಪಿ.ಎಂ ಗೆ ಕಳಿಸಿದ ನಂತರ ಸ್ಕೆಚ್ ತಯಾರಿಸಿದ್ದೇನೆ.

8. ನಿಪಿ-4 ರಲ್ಲಿ 4 ಮಳಿಗೆಗಳಿವೆ. ಒಟ್ಟು 6 ಇವೆ ಎನ್ನುತ್ತಾರೆ. ನನ್ನ ಸಿಬ್ಬಂದಿ ಸುರಳೀಹಳ್ಳಿಯವರು ಪೋಟೋದಲ್ಲಿ ಭಾಗವಹಿಸಿದ ಬಗ್ಗೆ ಎಲ್ಲೂ ಇಲ್ಲ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಭಾಗವಹಿಸಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಮಾಡುವುದಕ್ಕಿಂತ ಮೊದಲು ಊರಿನ ಜನ ಹೋಗಿ ಬಂದಿರುವುದು ಇತ್ತು ಎಂದರೆ ಸರಿಯಲ್ಲ. ಪಂಚರ ಸಮಕ್ಷಮ ವಸ್ತುಗಳನ್ನು ಜಪ್ತು ಮಾಡಿ ಸೀಲು ಮಾಡಿದ ಯಾವುದೇ ಪೋಟೋ ಇಲ್ಲ ಎಂದರೆ ಸರಿ. ಪೋಟೋ ತೆಗೆಯಲು ತೊಂದರೆ ಇರಲಿಲ್ಲ.

9. ಚಾಸಾ-1 ಅವರ ಮೇಲೆ ನಮ್ಮ ಠಾಣೆಯಲ್ಲಿ ಕೇಸು ಇತ್ತು ಎಂದರೆ ಸರಿಯಲ್ಲ. ಮೃತ ನಿಂಗಪ್ಪನ ಮೇಲೆ ಕೇಸು ಇತ್ತು ಎಂದರೆ ಸರಿಯಲ್ಲ. ಅವನಿಗೆ ಜೀವಾವಧಿ ಶಿಕ್ಷೆಯಾಗಿ ಜೈಲಿಗೆ ಹೋಗಿದ್ದ ಎಂದರೆ ಸರಿಯಲ್ಲ. ನಿಂಗಪ್ಪನ ಮೇಲೆ ರೌಡಿ ಶೀಟ್ ಇತ್ತು ಎಂದರೆ ಸರಿಯಲ್ಲ. ಶವವನ್ನು ಮೊದಲು ನೋಡಿದವರು ದೀಪಕ್ ಜನ್ನು. ಆರೋಪಿಗಳು ನನ್ನ ಮುಂದೆ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ಅವರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತೇನೆಂದರೆ ಸರಿಯಲ್ಲ. ಸ್ಥಳಕ್ಕೆ ಹೋಗಿಲ್ಲ, ಸ್ಥಳ ಪಂಚನಾಮೆ ಮಾಡಿಲ್ಲ, ಶವ ಪಂಚನಾಮೆ ಮಾಡಿಲ್ಲ, ಫೋಟೋ ತೆಗೆದಿಲ್ಲ ಎಂದರೆ ಸರಿಯಲ್ಲ. ಆರೋಪಿಗಳಿಗೂ ಮು.ಮಾ-1 ರಿಂದ 7 ಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಒಂದನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ವಿಶೇಷ ನ್ಯಾಯಾಧೀಶರು ಹಾವೇರಿ.